# ಲಾಟ್ವಿಯಾದ ಕಿರೀಟ 'ರಿಗಾ'ದಲ್ಲೊಂದು ಪಯಣ



**90ರ ದಶಕದಲ್ಲಿ ಸ್ವಾತಂತ್ರ್ಯ ಪಡೆದು, ಅಲ್ಪ ಕಾಲದಲ್ಲೇ ಸಿರಿವಂತ ದೇಶವಾಗಿ ಹೊರಹೊಮ್ಮಿದ ದೇಶ ಲಾಟ್ವಿಯಾ. ತನ್ನ ಶಾಂತಿ ಪಠಣದಿಂದ ಜಗತ್ತಿನ ಗಮನಸೆಳೆದ ಈ ದೇಶದ ಮತ್ತೂ ಒಂದು ವಿಶೇಷತೆ ಎದ್ದು ಕಾಣುವುದು ವಿಭಿನ್ನ ವಿನ್ಯಾಸದ ಪುಸ್ತಕಾಲಯದಲ್ಲಿ.**

**■ ಸರೋಜಾ ಪ್ರಕಾಶ್**

'ಯೂರೋಪ್ ದೇಶಗಳನ್ನು ಬೇಸಿಗೆಯಲ್ಲೇ ನೋಡಬೇಕು, ಒಂದು ವಾರವಾದರೂ ಓಡಾಡಿ ಬನ್ನಿ...' – ಸ್ಟಾಕ್‌ಹೋಂಗೆ ಹೋಗಿದ್ದ ನಮಗೆ, ಅಲ್ಲಿ ನೆಲೆಸಿದ್ದ ಮಗಳ ಈ ಮಾತು ನೆರೆದೇಶಗಳನ್ನು ನೋಡುವ ಅವಕಾಶ ಒದಗಿಸಿತ್ತು. ಬಾಲ್ಟಿಕ್ ದೇಶಗಳಾದ ಲಾಟ್ವಿಯಾ, ಎಸ್ಟೋನಿಯಾ ಮತ್ತು ಲಿಥುಯೇನಿಯಾ, ಇವುಗಳಲ್ಲಿ ಮೊದಲೆರಡು ದೇಶಗಳ ರಾಜಧಾನಿಗಳು ರಿಗಾ ಮತ್ತು ತಲ್ಲಿನ್‌ಗಳನ್ನು ಒಂದು ವಾರದ ಅವಧಿ ಸುತ್ತು ಹಾಕಿ ಬರುವುದೆಂದು ತೀರ್ಮಾನವಾಯಿತು.

ವಿಮಾನದ ಟಿಕೆಟ್, ಉಳಿಯಲು ಮನೆ ಬುಕ್ ಆದವು. ಬ್ಯಾಕ್ ಪ್ಯಾಕ್ ಬೆನ್ನಿಗೇರಿಸಿ ನಾವಿಬ್ಬರೂ ಹೊರಟೆವು. ಸ್ಟಾಕ್ ಹೋಂನಿಂದ ರಿಗಾಗೆ ಎರಡೇ ತಾಸಿನ ವಿಮಾನ ಪಯಣ. ಆದರೂ ಸೂರ್ಯನಿಗೆ ಅಭಿಮುಖವಾಗಿ ಹಾರಿದ್ದರಿಂದ ರಿಗಾದಲ್ಲಿ ಸಮಯ ಒಂದು ಗಂಟೆ ಮುಂದಿದೆ. ವಿಮಾನ ನಿಲ್ದಾಣದ ಹೊರಗೆ ಬಂದರೆ ಎದುರಿಗೆ ಬಸ್ ಸ್ಟಾಪ್‌ಗಳು. ನಾವೊಂದು ಸ್ಟಾಪ್ ಹೊಕ್ಕು ಕಾರ್ಡ್ ಮಶಿನ್‌ನಿಂದ 16 ಯೂರೊಗೆ ಎರಡು ಟಿಕೆಟ್ ಪಡೆದೆವು. ಮೂರು ದಿನಗಳ ಕಾಲ ಅದೇ ಕಾರ್ಡ್ ಹಿಡಿದು ಇಡೀ ರಿಗಾದಲ್ಲಿ ಎಲ್ಲಿಂದೆಲ್ಲಿಗೆ ಬೇಕಾದರೂ, ಯಾವ ಬಸ್, ಯಾವ ಟ್ರಾಮ್‌ನಲ್ಲಾದರೂ ಎಷ್ಟು ಬಾರಿ ಬೇಕಾದರೂ ಓಡಾಡಬಹುದು.

ಆಗಿನ್ನೂ ಹನ್ನೊಂದು ಗಂಟೆ. ಮಧ್ಯಾಹ್ನ ಮೂರರ ಒಳಗೆ ವಾಸ್ತವ್ಯ ತಲುಪುವ ಹಾಗಿಲ್ಲ. ಬಸ್ ಹತ್ತಿ ಕಾರ್ಡ್ ಸ್ವೈಪ್ ಮಾಡಿದೆವು. ಬಸ್‌ನಲ್ಲಿ ಅಲ್ಲಲ್ಲಿ ನಿಲುಗಡೆಗೆ ಒತ್ತುಗುಂಡಿಗಳು. ಟಿಕೆಟ್ ಕೇಳುವ, ನಿಲ್ಲಿಸಿ ಎಂದು ಕೂಗುವ ಗೊಂದಲವಿಲ್ಲ.

